## ಕಳೆದ ಸಂಚಿಕೆಯಲ್ಲಿ...



ಪಾಲ್‌ನ ಹಿನ್ನೆಲೆಯನ್ನು ನೀನಾಳ ತಂದೆ ಕಾಳಜಿಯಿಂದ ವಿಚಾರಿಸಿಕೊಂಡರು. ಕಾಲೇಜು ದಿನಗಳಲ್ಲೇ ಗರ್ಭಿಣಿಯಾಗಿದ್ದ ನೀನಾ ಭಾರತೀಯ ಸಂಸ್ಕೃತಿಯನ್ನು ನೆಚ್ಚಿಕೊಂಡಿದ್ದ ಅಪ್ಪ–ಅಮ್ಮನಿಗೆ ಬೇಸರ ಉಂಟುಮಾಡಿದ್ದುದು ಮಾತುಕತೆಯ ಸಂದರ್ಭದಲ್ಲಿ ಪಾಲ್‌ಗೆ ತಿಳಿಯಿತು. ಮದುವೆಯ ನಂತರ ಮಕ್ಕಳ ಜವಾಬ್ದಾರಿಯೂ ಹೆಗಲಿಗೇರುತ್ತದೆನ್ನುವುದನ್ನು ನೀನಾಳ ತಂದೆ ಸೂಚ್ಯವಾಗಿ ತಿಳಿಸಿದರು. ಇಬ್ಬರೂ ಬೇರೆ ಬೇರೆ ದೇಶದವರಾಗಿರುವುದರ ಬಗ್ಗೆಯೂ ಯೋಚಿಸಬೇಕಾಗುತ್ತದೆ ಎಂದರು. ಈ ಎಲ್ಲ ಸಂಗತಿಗಳನ್ನು ಪಾಲ್ ಯೋಚಿಸಿಯೇ ಇರಲಿಲ್ಲ. ಆದರೆ, ನೀನಾ ಹಾಗೂ ಪಾಲ್ ಒಬ್ಬರನ್ನೊಬ್ಬರು ಎಷ್ಟು ಹಚ್ಚಿಕೊಂಡಿದ್ದರೆಂದರೆ, ಉಳಿದ ಸಂಗತಿಗಳು ಅವರಿಗೆ ಮುಖ್ಯವೆನ್ನಿಸುತ್ತಿರಲಿಲ್ಲ. ತನ್ನೂರಿಗೆ ಹಿಂತಿರುಗಿದ ಪಾಲ್ ಕ್ರಿಸ್‌ಮಸ್ ಆಚರಣೆಯ ಸಿದ್ಧತೆಯಲ್ಲಿ ತೊಡಗಿದ. ಅವನ ಹೊಸ ಸಂಗಾತಿ ನೀನಾ ಮನೆಗೆ ಬರುವವಳಿದ್ದಳು. ನೀನಾ ತನ್ನೊಂದಿಗೆ ಸಂತೋಷವನ್ನೂ ಮನೆಗೆ ತಂದಳು. ಅವಳ ಆಗಮನ ಪಾಲ್‌ನ ತಂದೆ–ತಾಯಿಗೆ ಹಾಗೂ ಮಕ್ಕಳಿಗೆ ಖುಷಿ ತಂದಿತು. ಪಾಲ್‌ಗೆ ಬದುಕು ಎಷ್ಟು ಸುಂದರ ಎಂದು ಮತ್ತೊಮ್ಮೆ ಅನ್ನಿಸತೊಡಗಿತು.

ದೂರವಾಗಿ ಬೇರೆ ದೇಶಕ್ಕೆ ಹೋಗಿರುವುದು ಇಷ್ಟವಿರಲಿಲ್ಲ. ಅಲ್ಲದೆ ನನ್ನ ಜೀವನದ ಪ್ರಶ್ನೆ ಸಹ ಇತ್ತು. ನಾನು ನಲವತ್ತೆರಡನೆಯ ವಯಸ್ಸಿಗೆ ಕಾಲಿಟ್ಟಿದ್ದೆ. ಜೀವಮಾನವಿಡೀ ಒಂಟಿಯಾಗಿರಲು ಬಯಸುತ್ತಿರಲಿಲ್ಲ. ದೀರ್ಘ ನಿರೀಕ್ಷೆಯ ನಂತರ ನನಗಿಷ್ಟವಾದ ಹೆಣ್ಣೊಬ್ಬಳು ಸಿಕ್ಕಿದ್ದಳು. ಹತ್ತು ವಯಸ್ಸಿನ ನನ್ನ ಪುತ್ರಿಯರಾದ ಲೂಸಿ ಮತ್ತು ಗ್ರೇಸಿ ಹೇಳಿದರು, ‘ಅಪ್ಪಾ, ನೀವು ನಮ್ಮ ಬಗ್ಗೆ ಚಿಂತಿಸಬೇಡಿ. ನೀವು ಕೋಪನ್‌ಹೇಗನ್‌ಗೆ ಹೋಗಿ. ಮಮ್ಮಿಯಂತೂ ಎರಡನೆಯ ಮದುವೆಯನ್ನು ಮಾಡಿಕೊಂಡಿದ್ದಾರೆ. ಆದರೆ ನೀವು ಇದುವರೆಗೆ ಒಂಟಿಯಾಗಿರುವುದು ನಮಗೆ ಹಿಡಿಸಲ್ಲ. ನಿಮಗೂ ಒಬ್ಬ ಗರ್ಲ್ ಫ್ರೆಂಡ್ ಸಿಕ್ಕಿರುವುದು ನಮಗೆ ಅತ್ಯಂತ ಸಂತಸವಾಗಿದೆ. ನಾವು ನಿಮ್ಮನ್ನು ಭೇಟಿಯಾಗಲು ಕೋಪನ್‌ಹೇಗನ್‌ಗೆ ಬರುತ್ತಿರುತ್ತೇವೆ’.

ನನ್ನ ಪುತ್ರಿಯರು ನನ್ನ ಬಗ್ಗೆ ತೋರಿದ ಈ ಸಂವೇದನೆಯಿಂದ ನನ್ನ ಮನಸ್ಸು ತುಂಬಿ ಬಂತು. ನಾನು ಅವರನ್ನು ಚುಂಬಿಸಿದೆ.

‘ಇಂದು ದೂರಗಳು ಎಲ್ಲಿವೆ! ಜಗತ್ತು ಮುದುರುತ್ತಿದೆ. ಲೂಸಿ ಮತ್ತು ಗ್ರೇಸಿ ತಮ್ಮ ಶಾಲೆಯ ರಜಾದಿನಗಳಲ್ಲಿ ಕೋಪನ್‌ಹೇಗನ್‌ಗೆ ಬಂದು ನಮ್ಮೊಂದಿಗಿರುತ್ತಾರೆ’ ನೀನಾ ಸಹ ನನಗೆ ಹೇಳಿದಳು.

ಸಾಕಷ್ಟು ಚರ್ಚೆ ಮತ್ತು ಯೋಚನೆಯ ನಂತರ ನಾನು ನನ್ನ ಉದ್ಯೋಗ, ನನ್ನ ಪರಿವಾರ ಮತ್ತು ನನ್ನ ದೇಶವನ್ನು ತ್ಯಜಿಸಿದೆ. ಎಡಿನ್‌ಬರ್ಗ್‌ನಲ್ಲಿ ನನ್ನ ವ್ಯವಸ್ಥಿತವಾಗಿದ್ದ ಜೀವನವನ್ನು ತ್ಯಜಿಸಿ, ಈ ವಯಸ್ಸಿನಲ್ಲಿ ನನ್ನ ಪರಿವಾರದಿಂದ ದೂರವಾಗಿ, ಸಾಗರ ದಾಟಿ ನೀನಾಳ ಬಳಿಗೆ ಕೋಪನ್‌ಹೇಗನ್ನಿಗೆ ಬಂದೆ.

ತಾಸ್ಟ್ರುಪ್ ಬಂತು. ನಾನು ಮತ್ತೆ ಹನ್ನೆರಡು ಕಿ.ಮೀ. ನಡೆದಿದ್ದೇನೆ, ಅಂದರೆ ಮತ್ತೆ ಮೂರು ಗಂಟೆಗಳ ಕಾಲ ನಡೆದಿದ್ದೇನೆ. ನಾನು ಬೆಲರೂಪ್‌ನಿಂದ ತಾಸ್ಟ್ರುಪ್ ನಡುವೆ ಎಲ್ಲೂ ವಿಶ್ರಾಂತಿಯನ್ನು ಪಡೆದಿಲ್ಲ. ನಿರಂತರವಾಗಿ ನಡೆಯುತ್ತಿದ್ದೇನೆ. ಈ ಪ್ರದೇಶ ಕಾಲ್ನಡಿಗೆ ಮತ್ತು ಸೈಕಲ್ ಸವಾರಿ ಮಾಡಲು ಸುಂದರ ಕಾಲು ದಾರಿಗಳ ಒಂದು ವ್ಯವಸ್ಥಿತ ಅನುಕೂಲಗಳನ್ನು ಕಲ್ಪಿಸಿಕೊಡುತ್ತದೆ. ಇಲ್ಲಿಂದ ಹಾದು ಹೋಗುವಾಗ ಅದ್ಭುತ ಆನಂದ ಲಭಿಸುತ್ತಿದೆ. ಸುಂದರ ಪ್ರಾಕೃತಿಕ ಸೌಂದರ್ಯ, ಎದುರಿಗೆ ವಿಸ್ತೃತವಾಗಿ ಹಬ್ಬಿರುವ ಹಸುರುನೋಟ, ಅಲ್ಲಲ್ಲಿ ಚಿಕ್ಕಚಿಕ್ಕ ಝರಿಗಳ ಮಂದ ಹರಿವು... ಸೂರ್ಯ ಈಗಲೂ ಆಗಸದಲ್ಲಿದ್ದ.

### ಪುನರ್ವಿವಾಹ

ಹೊಸ ನೆಲ, ಹೊಸ ವಾತಾವರಣ, ಹೊಸ ಸಂಬಂಧ, ಹೊಸ ಅನುಭವ ಮತ್ತು ಹೊಸ ಚಾಲೆಂಜ್‌ಗಳು... ನಾನು ನೀನಾಳೊಂದಿಗೆ ಜೀವನ ನಡೆಸುವ ಇಚ್ಛೆಯಿಂದ ನನ್ನೆಲ್ಲಾ ಕಲೆ ಹಾಕಿದ್ದ ವಸ್ತುಗಳು, ಸ್ನೇಹಿತರುಬಂಧುಗಳು ಎಲ್ಲರನ್ನು ತ್ಯಜಿಸಿ ಅನಿಶ್ಚಿತ ಭವಿಷ್ಯದೆಡೆಗೆ ಧುಮುಕಿದ್ದೆ. ಪ್ರಸ್ತುತ ಒಂದು ಈಯು ಸಿಟಿಜನ್ ಆಗಿದ್ದರಿಂದ ಒಂದು ಯೂರೋಪಿನ ದೇಶದಿಂದ ಇನ್ನೊಂದು ಯೂರೋಪಿನ ದೇಶದಲ್ಲಿ ಸ್ಥಳಾಂತರಕ್ಕೆ ಯಾವುದೇ ಕಾನೂನು ಮತ್ತು ವಲಸೆಗೆ ಸಂಬಂಧಿಸಿದ ವಿಘ್ನಗಳು ಎದುರಾಗಲಿಲ್ಲ. ಅದೃಷ್ಟದಿಂದ ಡೆನ್ಮಾರ್ಕ್‌ನ ಒಂದು ಇಂಟರ್‌ನ್ಯಾಷನಲ್ ಶಾಲೆಯಲ್ಲಿ ನನಗೆ ಅಧ್ಯಾಪಕನ ಕೆಲಸ ಸಹ ತಕ್ಷಣ ಲಭಿಸಿತು. ಅಲ್ಲದೆ ನನಗೆ ಕೋಪನ್‌ಹೇಗನ್ನಿನಲ್ಲಿ ನನ್ನ ಸ್ಕಾಟಿಷ್ ಡ್ಯಾನ್ಸ್ ಗ್ರೂಪ್ ಸಹ ಸಿಕ್ಕಿತು. ಇದರ ಐವತ್ತು ಜನ ಸದಸ್ಯರಿದ್ದರು; ನಾನೂ ಸೇರಿ ಮೂವರು ನರ್ತಕರು ಮಾತ್ರ ಸ್ಕಾಟಿಷ್ ಆಗಿದ್ದರು, ಉಳಿದವರೆಲ್ಲರು ಡೇನಿಶ್ ಆಗಿದ್ದರು. ನಾವು ನಿಯಮಿತವಾಗಿ ಒಂದು ಜಿಮನೇಜಿಯಮ್ ಶಾಲೆಯಲ್ಲಿ ಡ್ಯಾನ್ಸ್ ತರಬೇತಿಗೆ ಕಲೆಯುತ್ತಿದ್ದೆವು. ಕ್ರಿಸ್‌ಮಸ್, ಈಸ್ಟರ್ ಮುಂತಾದ ಹಬ್ಬಗಳಲ್ಲಿ ಒಂದು ಕಂಪನಿ, ಒಂದು ಫರ್ಮ್ ಅಥವಾ ಸಂಘಟನೆ ಏರ್ಪಾಡು ಮಾಡಿದ ಕಾರ್ಯಕ್ರಮಗಳಲ್ಲಿ ನಾವು ಸ್ಕಾಟಿಷ್ ಕಂಟ್ರಿ ಡ್ಯಾನ್ಸಿಂಗ್ ಪ್ರದರ್ಶನಗಳನ್ನು ಮಾಡುತ್ತಿದ್ದೆವು. ಇದರಿಂದ ನನಗೆ ಯಾವುದೇ ವಿಧದ ಆದಾಯ ಲಭ್ಯವಾಗುತ್ತಿರಲಿಲ್ಲ, ಆದರೆ ನಾವು ಉದ್ಯೋಗಸ್ಥ ನರ್ತಕಿಯರು ಸಹ ಆಗಿರಲಿಲ್ಲ, ಇದು ನನ್ನಲ್ಲಿ ಸ್ಫೂರ್ತಿ ಮತ್ತು ಉತ್ಸಾಹವನ್ನು ಹೆಚ್ಚಿಸುತ್ತಿದ್ದು, ನನಗೆ ಪ್ರೇರಣೆ ಮತ್ತು ಶಕ್ತಿಯನ್ನು ತುಂಬುತ್ತಿತ್ತು. ನೃತ್ಯ ನನ್ನ ಹಾಬಿಯಾಗಿದ್ದು, ಅದು ನನಗೆ ಧೈರ್ಯ ಕೊಡುತ್ತದೆ.

ನನ್ನ ಇಂಟರ್‌ನ್ಯಾಷನಲ್ ಸ್ಕೂಲ್ ನನಗೆ ತುಂಬಾ ಇಷ್ಟವಾಗುತ್ತಿತ್ತು; ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಸೇರಿ ಎಪ್ಪತ್ತಕ್ಕಿಂತ ಹೆಚ್ಚು ದೇಶಗಳ ರಾಷ್ಟ್ರೀಯತೆಯ ಸಮನ್ವಯ ಶಾಲೆಯಲ್ಲಿತ್ತು. ಭಿನ್ನ ಭಿನ್ನ ರಾಷ್ಟ್ರೀಯತೆ ಮತ್ತು ಸಂಸ್ಕೃತಿಯ ಜನರೊಂದಿಗೆ ಕಲೆಯುವುದು, ಅವರೊಂದಿಗೆ ಕೆಲಸ ಮಾಡುವುದು ಜಗತ್ತಿನ ಬಗ್ಗೆ ಕಲಿಯುವ ಮತ್ತು ತಿಳಿಯುವ ಅವಕಾಶ ಲಭಿಸುತ್ತಿತ್ತು. ಜಗತ್ತಿನೆಲ್ಲೆಡೆ ಆಚರಿಸುವ ಈದ್, ದೀಪಾವಳಿ, ಕ್ರಿಸ್‌ಮಸ್, ಚೈನೀಸ್ ನ್ಯೂ ಇಯರ್, ಪರ್ಷಿಯನ್ ನ್ಯೂ ಇಯರ್ ಮುಂತಾದ ಹಬ್ಬಗಳ ಬಗ್ಗೆ ನಮಗೆ ತಿಳಿಯುತ್ತಿತ್ತು. ನೀನಾಳ ಮನೆ ಸಹ ಸುವ್ಯವಸ್ಥೆಯೊಂದಿಗೆ, ಆರಾಮದಾಯಕ ವಾಸಸ್ಥಳವಾಗಿತ್ತು. ಇದಕ್ಕಿಂತ ಹೆಚ್ಚು ಒಬ್ಬ ಪುರುಷನಿಗೆ ಇನ್ನೇನು ಬೇಕು?

ನನ್ನ ಮನಸ್ಸಿನ ಶೂನ್ಯ ಜಾಗ ಕ್ರಮೇಣ ತುಂಬಲಾರಂಭಿಸಿತು. ನೀನಾಳನ್ನು ಪಡೆದು ಜೀವನದಲ್ಲಿ ಒಂದು ವಿಧದ ಸಂಪೂರ್ಣತೆಯ ಅನುಭವವಾಗುತ್ತಿತ್ತು. ನೀನಾಳ ಸ್ವತಂತ್ರತೆ, ಅವಳ ದೃಢ ನಿಲುವುಗಳು ಮತ್ತು ಮಹತ್ವಾಕಾಂಕ್ಷೆಯ ವ್ಯಕ್ತಿತ್ವ ನನಗೆ ಅತ್ಯಂತ ಪ್ರಿಯವಾಗಿದ್ದವು. ನೀನಾ ಓರ್ವ ದೃಢ ಇಚ್ಛಾಶಕ್ತಿಯ ಮಹಿಳೆಯಾಗಿದ್ದಳು.

ಕೆಲವು ದಿನಗಳ ನಂತರ ಒಂದು ಸಂಜೆ, ನಾವಿಬ್ಬರು ಪಾರ್ಕ್ ಮಧ್ಯದಲ್ಲಿ ಕೂತಿದ್ದೆವು. ನಾನು ನೀನಾಳ ಕೈಯನ್ನು ಹಿಡಿದು ಪ್ರೀತಿಯಿಂದ ಅವಳೆದುರಿಗೆ ವಿವಾಹದ ಪ್ರಸ್ತಾವವನ್ನಿಟ್ಟೆ.

ನೀನಾ ಹೇಳಿದಳು, ‘ಪ್ರಸ್ತಾವ ಪ್ರಾಮಾಣಿಕವಾಗಿದೆ’. ನಾನು ನೀನಾಳೊಂದಿಗೆ ವಿವಾಹ ಸೂತ್ರದಲ್ಲಿ ಬಂಧಿಸಲ್ಪಟ್ಟು ನನ್ನ ಸಂಬಂಧಕ್ಕೆ ಒಂದು ಶಾಶ್ವತ ರೂಪವನ್ನು ಕೊಡಲು ಬಯಸುತ್ತಿದ್ದೆ. ನನಗೆ ಜೀವನದಲ್ಲಿ ಅಸ್ಥಿರತೆ ಬೇಕಿರಲಿಲ್ಲ. ಸೌಂದ್ರಾಳ ನಂತರ ಓರ್ವ ಜೀವನ ಸಂಗಾತಿಯನ್ನು ಅರಸುವಲ್ಲಿ ನಾನು ಏನೇನು ತಾನೇ ಪ್ರಯತ್ನಿಸಲಿಲ್ಲ; ಪಬ್, ಕ್ಲಬ್ ಮತ್ತು ಡೇಟಿಂಗ್ ವೆಬ್‌ಸೈಟ್‌ಗಳಲ್ಲಿ ಒಂಟಿ ಮತ್ತು ಏಕಾಂತದಲ್ಲಿರುವ